# ರಾಯಲ್ ಪ್ರೌಢಶಾಲೆ

ಮಂಜುನಾಥನಗರ, ಬೆಂಗಳೂರು–10

ಸಂಕಲನಾತ್ಮಕ ಮೌಲ್ಯಮಾಪನ – 01

ತರಗತಿ : 10 ವಿಷಯ : ಪ್ರಥಮ ಭಾಷೆ ಕನ್ನಡ ಅಂಕಗಳು : 100

---

## ವಿಭಾಗ – ಎ

**ಅ. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ.** **7x1=7**

1. ರಾಹಿಲನು ಯಾರು ?
2. ಶ್ರೀರಾಮನಿಗೆ ಸಮರ್ಪಿಸಲು ಶಬರಿ ಏನನ್ನು ಸಂಗ್ರಹಿಸಿದ್ದಳು ?
3. ಆಂಗ್ಲ ಸಾಮ್ರಾಜ್ಯದ ವೈಭವ ಕಂಡು ಬರುವ ಓಣಿ ಯಾವುದು ?
4. ನಾಲ್ವಡಿ ಕೃಷ್ಣರಾಜ ಒಡೆಯರು ಯಾವಾಗ ಪಟ್ಟಾಭಿಷಿಕ್ತರಾದರು ?
5. ಹಲಗಲಿ ಗುರುತು ಉಳಿಯದಂತಾದುದು ಏಕೆ ?
6. ಶ್ರೀಕೃಷ್ಣನು ಕರ್ಣನನ್ನು ರಥದಲ್ಲಿ ಹೇಗೆ ಕೂರಿಸಿದನು ?
7. ಪುಟ್ಟಪೋರಿ ಏನು ಮಾಡುತ್ತಿದ್ದಾಳೆ ?

**ಆ. ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ :** **10x2=20**

8. ಮುದುಕಿಯು ರಾಹಿಲನ ಬಳಿ ಯುದ್ಧದ ಬಗ್ಗೆ ನುಡಿದ ತಿರಸ್ಕಾರದ ಮಾತುಗಳೇನು ?
9. ಲಂಡನ್ ನಗರದಲ್ಲಿರುವ ಇಂಡಿಯಾ ಆಫೀಸ್ ಹೇಗಿದೆ ? ತಿಳಿಸಿ.
10. ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯನವರು ಏನೆಂದು ಹೇಳಿದ್ದಾರೆ ?
11. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಾವ ನೀರಾವರಿ ಯೋಜನೆಗಳು ಕಾರ್ಯರೂಪಕ್ಕೆ ಬಂದವು ?
12. ಹಕ್ಕಿಯು ಯಾವ ಮೇರೆಯನು ಮೀರಿ ನೀರನು ಹೀರಿದೆ ?
13. ಲಾವಣಿಗಳನ್ನು ಏಕೆ ವೀರಗೀತೆಗಳು ಎನ್ನಲಾಗಿದೆ ?
14. ಜಾತಿ ವ್ಯವಸ್ಥೆಯ ಬಗ್ಗೆ ವಿವೇಕಾನಂದರ ಅಭಿಪ್ರಾಯವೇನು ?
15. ವಿವೇಕಾನಂದರು ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಹೇಳಿದ್ದೇನು ?
16. ಪುಟ್ಟಿಯ ಪ್ರಶ್ನೆಗಳೇನು ?
17. 'ವಸಂತಮುಖ ತೋರಲಿಲ್ಲ' ಕವನದಲ್ಲಿ ಪ್ರಕೃತಿಯ ಸಂಭ್ರಮದ ವರ್ಣನೆ ಹೇಗೆ ವ್ಯಕ್ತವಾಗಿದೆ ?

**ಇ. ಕೊಟ್ಟಿರುವ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯ ಬರೆಯಿರಿ.** **6x3=18**

18. "ನಾನು ಆಕೆಯನ್ನು ಪರೀಕ್ಷಿಸುವೆ ನೀವು ಬಿಸಿನೀರು ಸಿದ್ಧಪಡಿಸಿ".
19. "ಬೆಳಕಿಗೊಲಿದವರ್ ಉರಿವ ಬತ್ತಿಯ ಕರುಕ ಕಾಣರು".
20. "ಹೊತ್ತು ! ಹೊತ್ತು ! ಹೊತ್ತೇಹಣ".
21. "ಹೊಡೆದರೂ ಗುಂಡು ಕರುಣೆ ಇಲ್ಲದ್ಹಂಗ".
22. "ಬಾಯ್ದಂಬುಲಕೆ ಕೈಯಾನುವರೆ'.
23. "ಪ್ರೀತಿಯ ಹಣತೆಯ ಹಚ್ಚೋಣ".

**Use E-Papers, Save Trees**
Above line hide when print out

**ಈ. ಕೊಟ್ಟಿರುವ ಲೇಖಕರ/ಕವಿಗಳ ಸ್ಥಳ, ಕಾಲ, ಕೃತಿಗಳ ಬಗ್ಗೆ ವಾಕ್ಯ ರೂಪದಲ್ಲಿ ಬರೆಯಿರಿ. 2x3=6**

24. ಜಯಪ್ಪಗೌಡ
25. ದ.ರಾ. ಬೇಂದ್ರೆ.

**ಉ. ಈ ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿ. 1x4=4**

26. ಕಲುಷಿತವಾದೀ ________
______________________
______________________
__________ ಮುಟ್ಟೋಣ.

**ಅಥವಾ**

ಮತಗಳೆಲ್ಲವೂ ________
______________________
______________________
__________ ಬಿತ್ತೋಣ.

**ಊ. ಕೊಟ್ಟಿರುವ ಪದ್ಯಭಾಗವನ್ನು ಓದಿ ಅರ್ಥೈಸಿಕೊಂಡು ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ. 1x4=4**

27. ಮರುಳ ಮಾಧವ ಮಹಿಯ ರಾಜ್ಯದ
ಸಿರಿಗೆ ಸೋಲುವನಲ್ಲ ಕೌಂತೇ
ಯರು ಸುಯೋಧನರೆನಗೆ ಬೆಸಕೈವಲ್ಲಿ ಮನವಿಲ್ಲ
ಹೊರೆದ ದಾತಾರಂಗೆ ಹಗೆವರ
ಶಿರವನರಿದೊಪ್ಪಿವೆನೆಂಬೀ
ಭರದೊಳಿರ್ದೆನು ಕೌರವೇಂದ್ರನ ಕೊಂದೆ ನೀನೆಂದ

**ಎ. ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿ. 2x4=8**

28. ಶಬರಿಯ ಚಿಂತೆ ಹಿಂಗಿ ಹೋದ ಸಂದರ್ಭವನ್ನು ವಿವರಿಸಿ.

ಅಥವಾ

ನಂಬಿಕೆಟ್ಟವರಿಲ್ಲ ಎಂಬ ಮಾತು ಶಬರಿಯ ಪಾಲಿಗೆ ಹೇಗೆ ನಿಜವಾಗಿದೆ ?

29. ಹಕ್ಕಿಯನ್ನು ಕಾಲಗತಿಗೆ ಹೋಲಿಸುತ್ತ ಕವಿ ಹೇಳಿರುವ ಮಾತುಗಳಾವುವು ?

ಅಥವಾ

ಹಕ್ಕಿಹಾರುತಿದೆ ನೋಡಿದಿರಾ ಪದ್ಯದ ಸಾರಾಂಶವನ್ನು ಬರೆಯಿರಿ.

**ಏ. 30. ಕೊಟ್ಟಿರುವ ಗದ್ಯಭಾಗವನ್ನು ಓದಿಕೊಂಡು ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1x4=4**

ಹನ್ನೆರಡನೆಯ ಶತಮಾನವೆಂದಾಕ್ಷಣ 'ವಚನಧರ್ಮ' ನಮ್ಮ ಮತಿಗೆ ಹೊಳೆಯುವುದು ಸಹಜ, ಅದಕ್ಕೆ ಕಾರಣ ಅಂದು ತನ್ನ ಉತ್ತುಂಗ ಶಿಖರವನ್ನು ತಲುಪಿತ್ತು. ವಚನ ಧರ್ಮ ಆ ಸ್ಥಿತಿಯನ್ನು ತಲುಪಲು ಮೂಲ ಕಾರಣವೇ ಶರಣರು. ಅವರ ಸಾಮಾಜಿಕ ಚಿಂತನೆಯ ಪರಿವರ್ತನೆಯ ಪ್ರಯತ್ನದಿಂದಾಗಿ ವಚನಧರ್ಮ ವಿಶ್ವಮಾನ್ಯ ಆಗುವ ಅರ್ಹತೆಯನ್ನು ಪಡೆದುಕೊಂಡಿತು. ಸಾಹಿತ್ಯ ಎನ್ನುವುದಕ್ಕೆ ವಚನಧರ್ಮ ಚಲನ ಶೀಲತೆಯನ್ನು ತಂದುಕೊಟ್ಟಿತು. ಅಂದಿನ ಸಮಾಜದಲ್ಲಿದ್ದಂತಹ ವರ್ಣವ್ಯವಸ್ಥೆಗೆ ಪೆಟ್ಟುಕೊಟ್ಟು ಸಾಮಾಜಿಕ, ಆರ್ಥಿಕ, ಆಧ್ಯಾತ್ಮಿಕ ರಂಗದಲ್ಲಿದ್ದಂತಹ ಎಲ್ಲಾ ತಾರತಮ್ಯಗಳನ್ನು ತೆಗೆದೊಗೆದು ಸ್ತ್ರೀ-ಪುರುಷ ಎಂಬ ಭೇದವನ್ನು ಅಳಿಸಿಹಾಕಿ ಎಲ್ಲಾ ವರ್ಗದ ಹಾಗೂ ಎಲ್ಲಾ ಸ್ತರದ ಜನತೆಯನ್ನು ಮುಟ್ಟುವ ಮಾನವೀಯ ಧರ್ಮವಾಯಿತು. ಧರ್ಮಾಚರಣೆ ವ್ಯಯಕ್ತಿಕವಾಗಿರಬೇಕು. ಅದರ ಫಲ ಮಾತ್ರ ಸಾರ್ವತ್ರಿಕವಾಗಿರಬೇಕು ಎಂದು ಶರಣರು ಬದುಕಿದರು, ಬಾಳಿದರು.

ಪ್ರಶ್ನೆಗಳು :

1. ವಚನಧರ್ಮ ವಿಶ್ವಧರ್ಮವಾಗುವ ಅರ್ಹತೆಯನ್ನು ಪಡೆದದ್ದು ಹೇಗೆ ?
2. ವಚನಧರ್ಮ ಮಾನವೀಯ ಧರ್ಮವಾಗಿದ್ದು ಹೇಗೆ ?

Use E-Papers, Save Trees
Above line hide when print out

## ವಿಭಾಗ – ಬಿ

**ಐ. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನಾರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ.** **6x1=6**

31. ವರ್ಗೀಯ ವ್ಯಂಜನದ ಕೊನೆಯ ಅಕ್ಷರಗಳು
    ಎ) ಯೋಗವಾಹಗಳು ಬಿ) ಅನುನಾಸಿಕಗಳು
    ಸಿ) ಸ್ವರಗಳು ಡಿ) ಅಲ್ಪಪ್ರಾಣಗಳು
32. ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಬಳಸುವ ಲೇಖನ ಚಿಹ್ನೆ:
    ಎ) ಪೂರ್ಣವಿರಾಮ ಬಿ) ಅಲ್ಪವಿರಾಮ
    ಸಿ) ಉದ್ಧರಣ ಡಿ) ಅರ್ಧವಿರಾಮ
33. "ಮಕ್ಕಳು ಹಾಲು ಕುಡಿಯುವುದರಿಂದ ಹಲ್ಲುಗಳು ಗಟ್ಟಿಯಾಗುತ್ತವೆ" ಇದು ಈ ವಾಕ್ಯದ ಪ್ರಕಾರಕ್ಕೆ ಸೇರಿದೆ.
    ಎ) ಸಾಮಾನ್ಯ ವಾಕ್ಯ ಬಿ) ಸಂಯೋಜಿತವಾಕ್ಯ
    ಸಿ) ಪ್ರಶ್ನಾರ್ಥಕ ವಾಕ್ಯ ಡಿ) ಮಿಶ್ರ ವಾಕ್ಯ
34. 'ದಿವಾನ' ಪದವು ಈ ಭಾಷೆಯಿಂದ ಕನ್ನಡಕ್ಕೆ ಬಂದಿದೆ.
    ಎ) ಪರ್ಷಿಯನ್ ಬಿ) ಪೋರ್ಚುಗೀಸ್
    ಸಿ) ಹಿಂದೂಸ್ಥಾನಿ ಡಿ) ಅರಬ್ಬೀ
35. 'ಇಸವಾಸ' ಪದದ ಗ್ರಾಂಥಿಕ ರೂಪ :
    ಎ) ಸಹವಾಸ ಬಿ) ವಿಶ್ವಾಸ ಸಿ) ವಿಸವಾಸ ಡಿ) ಇಸ್ವಿ
36. 'ಸಂಶಯದೊಳ್' ಪದದಲ್ಲಿರುವ ವಿಭಕ್ತಿ.
    ಎ) ಪಂಚಮಿ ಬಿ) ಷಷ್ಠಿ ಸಿ) ಸಪ್ತಮಿ ಡಿ) ಪ್ರಥಮ

**ಒ. ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೇ ಪದಕ್ಕೆ ಸರಿಹೊಂದುವ ಸಂಬಂಧಿ ಪದವನ್ನು ಬರೆಯಿರಿ.** **4x1=4**

37. ಪಕ್ಷಿ : ಹಕ್ಕಿ : : ಬ್ರಹ್ಮ : ______
38. ಕೂಡಲೆ : ಸಾಮಾನ್ಯಾರ್ಥಕಾವ್ಯಯ : : ಧಗಧಗ : ______
39. ಹರಿಕಾರ : ಮುಂದಾಳು : : ಸುಸಂಗತ : ______
40. ಮೊಟ್ಟಮೊದಲು: ದ್ವಿರುಕ್ತಿ : : ಹಾಲ್ಜೇನು : ______

**ಓ. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ ಛಂದಸ್ಸಿನ ಹೆಸರನ್ನು ಬರೆಯಿರಿ. 3x1=3**

41. ಏನು ಹೇಳ್ಳೈ ಕರ್ಣ ಚಿತ್ತ
    ಗ್ಲಾನಿ ಯಾವುದು ಮನಕೆ ಕುಂತೀ
    ಸೂನುಗಳ ಬೆಸಕೈಸಿಕೊಂಬುದು ಸೇರದೇ ನಿನಗೆ.

42. ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ;
    ಲಕ್ಷಣ ಬರೆದು ಸಮನ್ವಯಿಸಿ: **3x1=3**
    ಮಾರಿಗೌತನವಾಯಿತು ನಾಳಿನ ಭಾರತವು.

Use E-Papers, Save Trees
Above line hide when print out

## ವಿಭಾಗ – ಸಿ

**ಔ. 43. ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ.** **1x3=3**

ಅ) ತಾಳಿದವನು ಬಾಳಿಯಾನು

ಆ) ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ

44. ನಿಮ್ಮನ್ನು ಮೈಸೂರು ಜಿಲ್ಲೆಯ ಹುಣಸೂರಿನ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ಪೂರ್ವಿಕ್' ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ನಡೆದ 73ನೇ 'ಸ್ವಾತಂತ್ರ್ಯೋತ್ಸವ ಸಮಾರಂಭ' ಕಾರ್ಯಕ್ರಮದ ವರದಿಯನ್ನು ಪ್ರಕಟಿಸುವಂತೆ ಕೋರಿ, ಪ್ರಜಾವಾಣಿ ಪತ್ರಿಕೆಯ ಸಂಪಾದಕರಿಗೆ ಪತ್ರ ಬರೆಯಿರಿ. **1x5=5**

ಅಥವಾ

ನಿಮ್ಮನ್ನು ಕೊಡಗಿನ ಕುಶಾಲನಗರದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ದೀಪಿಕಾ' ಎಂದು ಭಾವಿಸಿಕೊಂಡು ಚಿತ್ರದುರ್ಗ ಜಿಲ್ಲೆಯ ರಾಂಪುರ ನಿವಾಸಿಯಾದ ನಿಮ್ಮ ಗೆಳತಿ ಮೋನಿಕಾ. ಎಂಬುವವಳಿಗೆ ನಿಮ್ಮ ವಿದ್ಯಾಭ್ಯಾಸದ ಪ್ರಗತಿಯನ್ನು ತಿಳಿಸಿ ಪತ್ರ ಬರೆಯಿರಿ.

45. ಕೊಟ್ಟಿರುವ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ. **1x5=5**

* ಪ್ರಾಚ್ಯ ಸ್ಮಾರಕಗಳ ಸಂರಕ್ಷಣೆ
* ಪ್ರಾಕೃತಿಕ ವಿಕೋಪ

* * * * *

**Use E-Papers, Save Trees**
Above line hide when print out